# ಅಬಕಾರಿ ರಕ್ಷಕರು ಪ್ರಶ್ನೆ ಪತ್ರಿಕೆ – 2013

ಅವಧಿ : 90 ನಿಮಿಷಗಳು | ಅಂಕಗಳು : 150

**1. ಕರ್ನಾಟಕದ ಒಟ್ಟು ವಿಧಾನಸಭಾ ಸ್ಥಾನಗಳ ಸಂಖ್ಯೆ.**
ಎ. 28 ಬಿ. 234 ಸಿ. 214 ಡಿ. 224

**2. ಕರ್ನಾಟಕದಲ್ಲಿ ಇತ್ತೀಚೆಗೆ ಜ್ಞಾನಪೀಠ ಪ್ರಶಸ್ತಿ ಗಳಿಸಿದವರು.**
ಎ. ಯು. ಆರ್. ಅನಂತಮೂರ್ತಿ
ಬಿ. ಗಿರೀಶ್ ಕಾರ್ನಾಡ್
ಸಿ. ಚಂದ್ರಶೇಖರ ಪಾಟೀಲ
ಡಿ. ಚಂದ್ರಶೇಖರ ಕಂಬಾರ

**3. ಒಂದು ದಿನದ ಕ್ರಿಕೆಟ್ ಪಂದ್ಯದಲ್ಲಿ ದ್ವಿಶತಕ ಗಳಿಸಿದ ಮೊದಲ ಕ್ರಿಕೆಟ್ ಪಟು.**
ಎ. ವೀರೇಂದ್ರ ಸೆಹವಾಗ್
ಬಿ. ಬ್ರಿಯಾನ್ ಲಾರಾ
ಸಿ. ಎಂ. ಎಸ್. ಧೋನಿ
ಡಿ. ಸಚಿನ್ ತೆಂಡೂಲ್ಕರ್

**4. ಕರ್ನಾಟಕದಲ್ಲಿರುವ ಒಟ್ಟು ಜಿಲ್ಲೆಗಳ ಸಂಖ್ಯೆ**
ಎ. 30 ಬಿ. 32 ಸಿ. 28 ಡಿ. 31

**5. ವಿಶ್ವದ ಅತಿವೇಗದ ಸೂಪರ್ ಗಣಕ ಎನಿಸಿ ಕೊಂಡಿರುವ ಟೈಟಾನ್‌ನ್ನು ನಿರ್ಮಿಸಿದ ಕಂಪೆನಿಯ ಹೆಸರು.**
ಎ. ಕ್ರೇ ಮೇಕ್ ಬಿ. ಐಬಿಎಂ
ಸಿ. ಫ್ಯುಜಿತ್ಸು ಡಿ. ಇಂಟೆಲ್

**6. ಕೇಂದ್ರ ಸರ್ಕಾರವು ಆರ್‌ಬಿಐನ ಹಿಂದಿನ ಗೌರ್ನರ್ ಆಗಿದ್ದ ಈ ಕೆಳಕಂಡವರ ಅಧ್ಯಕ್ಷತೆಯಲ್ಲಿ ಹದಿನಾಲ್ಕನೇ ಹಣಕಾಸು ಆಯೋಗವನ್ನು ಸ್ಥಾಪಿಸಿದೆ.**
ಎ. ಪಿ. ವಿ. ರೆಡ್ಡಿ ಬಿ. ಕೆ. ಟಿ. ಎಸ್ ತುಳಸಿ
ಸಿ. ಡಿ. ಸುಬ್ಬರಾವ್ ಡಿ. ವೈ. ವಿ. ರೆಡ್ಡಿ

**7. ಕರ್ನಾಟಕದ ಮೊದಲ ಮಹಿಳಾ ರಾಜ್ಯಪಾಲರು.**
ಎ. ಶ್ರೀಮತಿ ಮಾರ್ಗರೆಟ್ ಆಳ್ವಾ
ಬಿ. ಶ್ರೀಮತಿ ಸರೋಜಿನಿ ನಾಯ್ಡು
ಸಿ. ಶ್ರೀಮತಿ ವಿ.ಎಸ್. ರಮಾದೇವಿ
ಡಿ. ಶ್ರೀಮತಿ ಶೀಲಾ ದೀಕ್ಷಿತ್

**8. ವಿಶ್ವ ಆರ್ಥಿಕ ವೇದಿಕೆಯು ಕ್ರೋಢೀಕರಿಸಿರುವ ಜಾಗತಿಕ ಸ್ಪರ್ಧಾತ್ಮಕ ಸೂಚಿ 2012–13ರಲ್ಲಿ ಭಾರತ ಯಾವ ಸ್ಥಾನದಲ್ಲಿದೆ?**
ಎ. 119 ಬಿ. 89 ಸಿ. 59 ಡಿ. 39

**9. ರೈಲಿನ ಇಂಟರ್‌ನೆಟ್‌ಗಾಗಿ ಉಪಗ್ರಹದ ಈ ಕೆಳಗಿನ ಫ್ರೀಕ್ವೆನ್ಸಿ ಬ್ಯಾಂಡ್ ನ್ನು ಬಳಸಿಕೊಳ್ಳುವುದಕ್ಕೆ ಇತ್ತೀಚೆಗೆ ಇಸ್ರೋ ಅನುಮತಿ ನೀಡಿದೆ.**
ಎ. ಕೆ ಯು ಬ್ಯಾಂಡ್ ಬಿ. ಕೆ ಬ್ಯಾಂಡ್
ಸಿ. ಎಸ್ ಬ್ಯಾಂಡ್ ಡಿ. ಕ್ಯೂ ಬ್ಯಾಂಡ್

**10. ಭಾರತದಲ್ಲಿ ಔಪಚಾರಿಕವಾಗಿ ಮುಂಗಡ ಪತ್ರವನ್ನು ಯಾವಾಗ ಜಾರಿಗೆ ತರಲಾಯಿತು?**
ಎ. 1860 ಬಿ. 1951 ಸಿ. 1950 ಡಿ. 1868

**11. ವಿಶ್ವ ವ್ಯಾಪಾರ ಸಂಸ್ಥೆಯ 186ನೇ ಸದಸ್ಯತ್ವವನ್ನು ಪಡೆದ ದೇಶ.**
ಎ. ರಷ್ಯಾ ಬಿ. ದಕ್ಷಿಣ ಸೂಡಾನ್
ಸಿ. ಫ್ರಾನ್ಸ್ ಡಿ. ವೆಸ್ಟ್ ಇಂಡೀಸ್

**12. ಮಳೀಮಠ ಸಮಿತಿ ವರದಿಯು ಯಾವುದಕ್ಕೆ ಸಂಬಂಧಿಸಿದೆ?**
ಎ. ಕ್ರಿಮಿನಲ್ ನ್ಯಾಯ ಆಡಳಿತದ ಸುಧಾರಣೆ
ಬಿ. ಸ್ಟಾಕ್ ಮಾರುಕಟ್ಟೆ ಸುಧಾರಣೆ
ಸಿ. ವಿವಾಹ ವಿಚ್ಛೇದನಕ್ಕೆ ಸಂಬಂಧಿಸಿದ ಕಾನೂನುಗಳ ಪುನರಾವಲೋಕನ
ಡಿ. ಐಎಎಸ್ ಮತ್ತು ಐಪಿಎಸ್‌ಗಳ ರದ್ದತಿ

**13. 2020ರ ವೇಳೆಗೆ, ಕರ್ನಾಟಕ ಸರ್ಕಾರವು ಅಂದಾಜಿಸಿರುವ ಸಾಫ್ಟ್ ವೇರ್ ರಫ್ತುಗಳ ಗುರಿ ಎಷ್ಟು?**
ಎ. 4 ಲಕ್ಷ ಕೋಟಿ ರೂ.
ಬಿ. 5 ಲಕ್ಷ ಕೋಟಿ ರೂ.
ಸಿ. 8 ಲಕ್ಷ ಕೋಟಿ ರೂ.
ಡಿ. 3 ಲಕ್ಷ ಕೋಟಿ ರೂ.

**14. ಕರ್ನಾಟಕದ ಯಾವ ಸ್ಥಳದಲ್ಲಿ ಸೆಂಟ್ರಲ್ ವಿಲೇಜ್ ಪಾಟರಿ ಸಂಸ್ಥೆ ಇದೆ?**
ಎ. ಪುರ ಬಿ. ಆಜಾದ್ ಪುರ
ಸಿ. ಖಾನಾಪುರ ಡಿ. ಮಹಾಲಿಂಗಪುರ

**15. ಭಾರತದಲ್ಲಿ ಅತ್ಯಂತ ಒಣಭೂಮಿ ಇರುವ ಸ್ಥಳ:**
ಎ. ಲೇಹ್ ಬಿ. ಬನ್ನೇರ್
ಸಿ. ಜೈಸಲ್ಮೇರ್ ಡಿ. ಬಿಕಾನೇರ್

**16. 2013ರ ಏರೋ ಇಂಡಿಯಾದಲ್ಲಿ ಯಾವ ರಾಜ್ಯದ ಮುಖ್ಯಮಂತ್ರಿಯವರು ದೇಶದಲ್ಲೇ ಅಂತಹ ಮೊದಲನೆಯ ಹೇಳಿಕೆ ಎನ್ನಬಹುದಾದ ಸರ್ಕಾರದ ಏರೋಸ್ಪೇಸ್ ನೀತಿಯನ್ನು ಘೋಷಿಸಿದರು?**

ಎ. ಕರ್ನಾಟಕ ಬಿ. ಮಹಾರಾಷ್ಟ್ರ

ಸಿ. ಗೋವಾ ಡಿ. ಪಂಜಾಬ್

**17. 2012ನೇ ಸಾಲಿನಲ್ಲಿ ಸಾಹಿತ್ಯಕ್ಕಾಗಿ ಅಂತರರಾಷ್ಟ್ರೀಯ ನೋಬೆಲ್ ಬಹುಮಾನ ಗಳಿಸಿದವರು.**

ಎ. ಮೋಯಾನ್ ಬಿ. ಅಲ್ವಿನ್ ರೋತ್

ಸಿ. ಡೇವಿಡ್ ವೈನ್ ಲ್ಯಾಂಡ್

ಡಿ. ಸರ್ ಜಾನ್ ಗುರ್ಡನ್

**18. ನ್ಯಾಯಮೂರ್ತಿ ಜೆಎಸ್ ವರ್ಮಾ ಸಮಿತಿ ಯಾವುದಕ್ಕೆ ಸಂಬಂಧಿಸಿದೆ?**

ಎ. ಅಲ್ಪ ಸಂಖ್ಯಾತರ ಮೇಲಿನ ದೌರ್ಜನ್ಯಗಳು

ಬಿ. ಮಹಿಳೆಯರ ಮೇಲೆ ನಡೆಯುವ ಅಪರಾಧಗಳು

ಸಿ. ಪ.ಜಾ ಮತ್ತು ಪ. ಪಂಗಡಗಳ ಮೇಲೆ ನಡೆಯುವ ಅಪರಾಧಗಳು

ಡಿ. ಇವು ಯಾವುವೂ ಅಲ್ಲ

**19. ಪಶ್ಚಿಮ ಘಟ್ಟಗಳಲ್ಲಿರುವ ಅತ್ಯಂತ ಅಗಲವಾದ ಕಂದರ**

ಎ. ಭೋರ್ ಘಾಟ್ ಬಿ. ಥಾಲ್ ಘಾಟ್

ಸಿ. ಖಾಂಡ್ಯಾ ಕಂದರ ಡಿ. ಪಲಾಕ್ಕಾಡ್

**20. ಭಾರತದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ಮೇಕೆಯ ತಳಿ ಯಾವುದು?**

ಎ. ಬರ್ಬರಿ ಬಿ. ಬೀಟಲ್

ಸಿ. ಜಮ್ನಾಪಾರಿ ಡಿ. ಬ್ಲಾಕ್ ಬಂಗಾಲ್

**21. 2011ರಲ್ಲಿ ಮೊದಲ ವಿಶ್ವ ಶಿಕ್ಷಣ ಶೃಂಗಸಭೆ ನಡೆದ ಸ್ಥಳ**

ಎ. ಜಿನಿವಾ ಬಿ. ಟೋಕಿಯೋ

ಸಿ. ನವದೆಹಲಿ ಡಿ. ರೋಮ್

**22. 2013ರ ಜನವರಿ 11ರಂದು ನವದೆಹಲಿಯಲ್ಲಿ ನಡೆದ BRICS ಆರೋಗ್ಯ ಸಚಿವರ ಸಮಾವೇಶದಲ್ಲಿ ಯಾವ ಯಾವ ದೇಶಗಳು ಪ್ರತಿನಿಧಿಸಿದ್ದವು?**

ಎ. ಬ್ರೆಜಿಲ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ

ಬಿ. ಬಾಂಗ್ಲಾದೇಶ್, ರುಮೇನಿಯಾ, ಇಂಡೋನೇಶಿಯಾ, ಚಿಲಿ, ದಕ್ಷಿಣ ಆಫ್ರಿಕಾ

ಸಿ. ಭೂತಾನ್, ರಷ್ಯಾ, ಭಾರತ, ಚೀನಾ, ದಕ್ಷಿಣ ಆಫ್ರಿಕಾ

ಡಿ. ಬಾಂಗ್ಲಾದೇಶ್, ರಷ್ಯಾ, ಇಟಲಿ, ಚೀನಾ, ದಕ್ಷಿಣ ಆಫ್ರಿಕಾ

**23. "Kurukshetra to Kargil" ಎಂಬ ಇತ್ತೀಚಿನ ಕೃತಿಯನ್ನು ಬರೆದವರು.**

ಎ. ಕರಣ್ ಸಿಂಗ್ ಬಿ. ಕುಲ್‌ದೀಪ್ ಸಿಂಗ್

ಸಿ. ಸೂರ್ಯನಾಥ್ ಸಿಂಗ್

ಡಿ. ಕುಣಾಲ್ ಬಾರದ್ವಾಜ್

**24. 5ಲಕ್ಷ ರೂ ವರೆಗಿನ ತೆರಿಗೆಗೊಳಪಡುವ ಆದಾಯದ ಪ್ರತ್ಯೇಕ ತೆರಿಗೆದಾರರಿಗೆ, ಹಣಕಾಸು ಸಚಿವರು 2012–13ರ ಕೇಂದ್ರ ಬಜೆಟ್ಟಿನಲ್ಲಿ ನೀಡಿದ ತೆರಿಗೆಯ ಕಡಿತದ ಮೊಬಲಗು ಎಷ್ಟು?**

ಎ. 5000ರೂ ಬಿ. 3000ರೂ

ಸಿ. 1000ರೂ ಡಿ. 2000ರೂ

**25. 2013ರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಚಾಂಪಿಯನ್ ಶಿಪ್ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಗೆದಿದ್ದರು.**

ಎ. ಲಿ – ನಾ ಬಿ. ದೀಪಿಕಾ ಪಲ್ಲಿಕಲ್

ಸಿ. ವಿಕ್ಟೋರಿಯಾ ಅಜರೆಂಕಾ ಡಿ. ಆ್ಯಗ್ನಿಯೆಜ್ಕಾ

**26. 2012ರ ಡಿಸೆಂಬರ್ ತಿಂಗಳಲ್ಲಿ, ಕರ್ನಾಟಕವು ತಮಿಳುನಾಡಿಗೆ ಎಷ್ಟು ಟಿಎಂಸಿ (ಸಾವಿರ ಮಿಲಿಯನ್ ಕ್ಯೂಬಿಕ್) ಅಡಿ ನೀರನ್ನು ಬಿಡಬೇಕೆಂದು ಕಾವೇರಿ ಉಸ್ತುವಾರಿ ಸಮಿತಿಯು (ಸಿಎಂಸಿ) 2012ರ ಡಿಸೆಂಬರ್ 7ರಂದು ತಿಳಿಸಿತು?**

ಎ. 12 ಟಿಎಂಸಿ ಅಡಿ ಬಿ. 10 ಟಿಎಂಸಿ ಅಡಿ

ಸಿ. 8 ಟಿಎಂಸಿ ಅಡಿ ಡಿ. 6 ಟಿಎಂಸಿ ಅಡಿ

**27. ಸಂಸತ್ತಿನ ಮೊದಲ ಅದಿವೇಶನ ಆರಂಭವಾದಾಗ ಅದು ಸಾರ್ವತ್ರಿಕ ಚುನಾವಣೆಗಳು ನಡೆದ ನಂತರದೇ ಆಗಿರಲಿ ಅಥವಾ ಪ್ರತಿವರ್ಷದ್ದೇ ಆಗಿರಲಿ ಸಂಸತ್ತಿನ ಎರಡೂ ಸದನಗಳನ್ನು ಉದ್ದೇಶಿಸಿ ಯಾರು ಮಾತಾಡುತ್ತಾರೆ?**

ಎ. ಪ್ರಧಾನಮಂತ್ರಿ ಬಿ. ಸ್ಪೀಕರ್

ಸಿ. ರಾಷ್ಟ್ರಪತಿ ಡಿ. ಮೇಲಿನ ಯಾರೂ ಅಲ್ಲ

**28. ಸಂಸತ್ ಮೇಲಿನ ದಾಳಿಗೆ ಸಂಬಂಧಿಸಿದ ಕೆಳಕಂಡ ಭಯೋತ್ಪಾದಕನನ್ನು 2013ರ ಫೆಬ್ರವರಿ 9ರಂದು ತಿಹಾರ್ ಜೈಲಿನಲ್ಲಿ ನೇಣುಹಾಕಿ ಅಲ್ಲಿಯೇ ಹೂಳಲಾಯಿತು.**

ಎ. ಅಜ್ಮಲ್ ಕಸಬ್ ಬಿ. ಅಫ್ಜಲ್ ಗುರು

ಸಿ. ಯಾಕುಬ್ ಗುರು ಡಿ. ಮಸೂದ್ ಅಜರ್

**29. ಕೇಂದ್ರ ಸರ್ಕಾರವು 2013ರ ಜನವರಿ 1ರಂದು ನೇರ ನಗದು ಸೌಲಭ್ಯ ವರ್ಗಾವಣೆ ಯೋಜನೆಯನ್ನು ಜಾರಿಗೆ ತಂದಿದ್ದು, ಇದರ ಮುಖ್ಯ ಲಕ್ಷಣ ಏನೆಂದರೆ**

ಎ. ಫಲಾನುಭವಿಗಳ ಕೈಗೆ ನೇರವಾಗಿ ನಗದನ್ನು ವರ್ಗಾಯಿಸುವುದು

ಬಿ. ಸ್ಥಳೀಯ ಆಡಳಿತದಂತಹ ಏಜೆಂಟ್ ಗಳ ಮೂಲಕ ನಗದನ್ನು ವರ್ಗಾಯಿಸುವುದು

ಸಿ. ಆಧಾರ್ ಸಂಪರ್ಕಿತ ಬ್ಯಾಂಕ್ ಖಾತೆಗಳಿಗೆ ನಗದನ್ನು

ನೇರವಾಗಿ ವರ್ಗಾಯಿಸುವುದು

ಡಿ. ಸಬ್ಸಿಡಿ ಪಡೆದ ಸರಕುಗಳ ರೂಪದಲ್ಲಿ ಫಲಾನುಭವಿಗಳಿಗೆ ನಗದನ್ನು ವರ್ಗಾಯಿಸುವುದು.

**30. ಭಾರತೀಯ ಸಂವಿಧಾನದ 40ನೇ ಅನುಚ್ಛೇದವು, ರಾಜ್ಯಗಳು ಪಂಚಾಯತಿಗಳು ವ್ಯವಸ್ಥೆಮಾಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತದೆ. ಪಂಚಾಯಿತಿಗಳು ಎಂದರೆ,**

ಎ. ಜಿಲ್ಲಾ ಮಟ್ಟದಲ್ಲಿರುವ ಒಂದು ವ್ಯವಸ್ಥೆ

ಬಿ. ಗ್ರಾಮ ಮಟ್ಟದಲ್ಲಿರುವ ಸ್ವಯಂ ಸರ್ಕಾರದ ಒಂದು ವ್ಯವಸ್ಥೆ

ಸಿ. ಕೇಂದ್ರ ಮಟ್ಟದಲ್ಲಿರುವ ಒಂದು ವ್ಯವಸ್ಥೆ

ಡಿ. ರಾಜ್ಯ ಮಟ್ಟದಲ್ಲಿರುವ ಒಂದು ವ್ಯವಸ್ಥೆ

**31. ಈ ಸಂವಿಧಾನದ ಅನ್ವಯ ನಡೆಯುವ ಸಂಸತ್ತಿನ ಹಾಗೂ ಪ್ರತಿಯೊಂದು ರಾಜ್ಯದ ವಿಧಾನ ಮಂಡಲದ ಮತ್ತು ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಯವರ ಎಲ್ಲ ಚುನಾವಣೆಗಳ ಉಸ್ತುವಾರಿ, ನಿರ್ದೇಶನ ಹಾಗೂ ನಿಯಂತ್ರಣ ಮತ್ತು ಮತದಾರರ ಪಟ್ಟಿಯ ಸಿದ್ಧತೆ ಮಾಡುವುದು ಮತ್ತು ಈ ಎಲ್ಲ ಚುನಾವಣೆಗಳನ್ನು ನಡೆಸುವ ಕೆಲಸವನ್ನು ನಿರ್ವಹಿಸುವ ಹೊಣೆ ಯಾರಿಗೆ ಸೇರಿರುತ್ತದೆ?**

ಎ. ಚುನಾವಣಾ ಆಯೋಗ ಬಿ. ಸಂಸತ್ತು

ಸಿ. ಆಯಾ ರಾಜ್ಯದ ವಿಧಾನಮಂಡಲ

ಡಿ. ಮೇಲಿನ ಯಾವುದೂ ಅಲ್ಲ

**32. 19(l) (g) ನೇ ಅನುಚ್ಛೇದವು ಭಾರತದ ಸೀಮೆಯೊಳಗೆ ಮುಕ್ತವಾಗಿ ಓಡಾಡುವ ಹಕ್ಕನ್ನು ಖಾತರಿಪಡಿಸುತ್ತದೆ. ಹೀಗೆಂದರೆ ಈ ಹಕ್ಕು**

ಎ. ಒಂದು ಸಂಪೂರ್ಣ ಸಂವಿಧಾನಿಕ ಖಾತರಿಯಾಗಿದ್ದು ನಾಗರೀಕರಿಗೂ ಹಾಗೂ ದೇಶದ ನಾಗರೀಕರಲ್ಲದವರಿಗೂ ಅನ್ವಯಿಸುತ್ತದೆ.

ಬಿ. ಇದು ಸಂಪೂರ್ಣ ಸಂವಿಧಾನಿಕ ಖಾತರಿಯಾಗಿದ್ದು ದೇಶದ ನಾಗರೀಕರಾದವರಿಗೆ ಮಾತ್ರ ಅನ್ವಯಿಸುತ್ತದೆ.

ಸಿ. ಇದು ಸಂವಿಧಾನಿಕ ಖಾತರಿಯಾಗಿದ್ದು ರಾಜ್ಯವು ವಿಧಿಸಬಹುದಾದ ಸೂಕ್ತ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ ಮತ್ತು ದೇಶದ ನಾಗರೀಕರಿಗೆ ಮಾತ್ರ ಅನ್ವಯಿಸುತ್ತದೆ.

ಡಿ. ಇದು ಸಾಂವಿಧಾನಿಕ ಖಾತರಿಯಾಗಿದ್ದು ರಾಜ್ಯವು ವಿಧಿಸಬಹುದಾದ ಸೂಕ್ತ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ ಮತ್ತು ದೇಶದ ನಾಗರೀಕರಿಗೂ ಹಾಗೂ ದೇಶದ ಹಾಗೂ ದೇಶದ ನಾಗರೀಕರಲ್ಲದವರಿಗೂ ಅನ್ವಯಿಸುತ್ತದೆ.

**33. ನಿರ್ದೇಶಕ ತತ್ವಗಳು, ಜನರ ಕಲ್ಯಾಣ ಸಾಧನೆಯ ದೃಷ್ಟಿಯಿಂದ ರಾಜ್ಯವು ನಿರ್ದಿಷ್ಟ ಸಾಕಾರಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯವನ್ನು ಬಾಧ್ಯತೆಗೆ ಒಳಗೊಳಪಡಿಸುತ್ತದೆ ಮತ್ತು ಕೆಳಕಂಡದಕ್ಕೆ ಮಾರ್ಗದರ್ಶನವಾಗುವಂತೆ ರೂಪುಗೊಂಡಿದೆ.**

ಎ. ರಾಜಕೀಯ ಪ್ರಜಾಪ್ರಭುತ್ವ

ಬಿ. ಆರ್ಥಿಕ ಪ್ರಜಾಪ್ರಭುತ್ವ

ಸಿ. ಸಾಮಾಜಿಕ ಪ್ರಜಾಪ್ರಭುತ್ವ

ಡಿ. (2) ಮತ್ತು (3) ಇವೆರಡೂ

**34. ಭಾರತದ ಕರಡು ಸಂವಿಧಾನವನ್ನು ಸಂವಿಧಾನ ಸಭೆಯು ಅಂಗೀಕರಿಸಿದ ದಿನಾಂಕ**

ಎ. 26ನೇ ಜನವರಿ 1950

ಬಿ. 26ನೇ ನವೆಂಬರ್ 1949

ಸಿ. 26ನೇ ನವೆಂಬರ್ 1948

ಡಿ. 15ನೇ ಆಗಸ್ಟ್ 1947

**35. ಕೆಳಕಂಡ ಸಂದರ್ಭದಲ್ಲಿ ಹಣದ ವಿಧೇಯಕವು ಕಾನೂನು ಆಗಬಹುದು.**

ಎ. ಎರಡೂ ಸದನಗಳು ಅದನ್ನು ಅನುಮೋದಿಸಿದ್ದಾಗ ಮಾತ್ರ

ಬಿ. ರಾಜ್ಯ ಸಭೆಯ ಸಮ್ಮತಿ ಬೇಕಾಗಿಲ್ಲ. ಹೀಗಾಗಿ ಹಣದ ವಿಧೇಯಕವು ಸಂಪೂರ್ಣವಾಗಿ ಲೋಕಸಭೆಯ ನಿಯಂತ್ರಣದಲ್ಲಿರುತ್ತದೆ.

ಸಿ. ಹಣದ ವಿಧೇಯಕದ ಮೇಲೆ ಪರಿಣಾಮಕಾರಿ ನಿಯಂತ್ರಣವನ್ನು ಹೊಂದಿರುವ ರಾಜ್ಯಸಭೆಯು ಅನುಮೋದಿಸಿದಾಗ

ಡಿ. ಮೇಲಿನ ಎಲ್ಲವೂ

**36. ನ್ಯಾಯಿಕ ನಿರ್ಣಯಗಳು ಭವಿಷ್ಯವನ್ನು ಬದ್ಧತೆಗೊಳಪಡಿಸುವ ಶಕ್ತಿಯನ್ನು ಹೊಂದಿರುತ್ತವೆ ಎಂದು ಕಲ್ಪಿಸಿಕೊಳ್ಳುವ ಸಿದ್ಧಾಂತವನ್ನು ಹೀಗೆನ್ನುತ್ತದೆ.**

ಎ. Precedents ಬಿ. Stare Decisis

ಸಿ. Ratio Decidendi ಡಿ. Res Judicate

**37. ಭೂಮಿಯ ಗಟ್ಟಿ ಪದರದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಸಿಗುವ ಮೂಲವಸ್ತು ಯಾವುದು?**

ಎ. ಅಲ್ಯೂಮಿನಿಯಂ ಬಿ. ಆಮ್ಲಜನಕ

ಸಿ. ಕಬ್ಬಿಣ ಡಿ. ತಾಮ್ರ

**38. ವಾತಾವರಣದಲ್ಲಿರುವ ಓಜೋನ್ ಹೇಗೆ ರೂಪುಗೊಳ್ಳುತ್ತದೆ?**